ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ ನ್ಯಾಯಾಲಯದಲ್ಲಿ,
ನ.ರಾ.ಪುರ.
ಸಿ.ಸಿ. ನಂ ಃ**106/2025**

| | | |
|---|---|---|
| ಸಾಕ್ಷಿದಾರರ ಹೆಸರು | ಃ ಅನಿಲ್ ಕುಮಾರ್ ಸಿ ಆರ್ | ಸಿ.ಡಬ್ಲ್ಯೂ - 01 |
| ತಂದೆಯ ಹೆಸರು | ಃ ರೇವಣ್ಣಗೌಡ | ಪಿ.ಡಬ್ಲ್ಯೂ - 01 |
| ವಯಸ್ಸು | ಃ 53 ವರ್ಷ | |
| ಉದ್ಯೋಗ | ಃ ವ್ಯವಸಾಯ/ರೈಟರ್ | |
| ವಾಸಸ್ಥಳ | ಃ ಚಿಕ್ಕಗ್ರಹಾರ, ಎನ್ ಆರ್ ಪುರ. | |

ದಿನಾಂಕಃ **03/02/2026** ರಂದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎಪಿಪಿ ಯವರಿಂದ ಃ

ಚಾಸಾ 2 ರಿಂದ 5 ರವರ ಪರಿಚಯ ಇರುತ್ತದೆ. ಚಾಸಾ 6 ರವರು ನನ್ನ ಹೆಂಡತಿ ಇರುತ್ತಾರೆ. ಚಾಸಾ 7 ರವರು ನನ್ನ ಅಣ್ಣನ ಮಗ, ಚಾಸಾ 8 ರವರು ನನ್ನ ಅಣ್ಣ, ಚಾಸಾ 9 ಮತ್ತು 10 ರವರ ಪರಿಚಯ ಇರುತ್ತದೆ.

2. ನಾನು ಸುಮಾರು 8 ವರ್ಷಗಳಿಂದ ಸಂಸಾರ ಸಮೇತವಾಗಿ ಶೃಂಗೇರಿ ತಾಲ್ಲೂಕಿನ ಕಿಗ್ಗ ಹೋಬಳಿಯ ಕೋಗೋಡು ಗ್ರಾಮದ ಅರಡಗೋಡು ವಾಸಿ ದಿವಂಗತ ಮಂಜಪ್ಪ ನಾಯಕ ರವರ ಮಗನಾದ ಶಿಶಿರ್ ರವರ ತೋಟದಲ್ಲಿ ರೈಟರ್ ಆಗಿ ಕೆಲಸ ಮಾಡಿಕೊಂಡು ಅಲ್ಲಿಯೇ ವಾಸವಿರುತ್ತೇನೆ. ನಮ್ಮ ಮನೆಯು ಆಡುವಳ್ಳಿ ಗ್ರಾಮದ ಚಿಕ್ಕಗ್ರಹಾರದಲ್ಲಿ ಇದ್ದು, ನನಗೆ ತೋಟ ಇದ್ದ ಕಾರಣ ವಾರಕ್ಕೊಮ್ಮೆ ಊರಿಗೆ ಬಂದು ಹೋಗುತ್ತಿದ್ದೆನು. ಬೇರೆ ಸಮಯದಲ್ಲಿ ನನಗೆ ಸಂಬಂಧಿಸಿದ ತೋಟವನ್ನು ನನ್ನ ಅಣ್ಣ ಮತ್ತು ಅವರ ಮಕ್ಕಳು ನೋಡಿಕೊಳ್ಳುತ್ತಿದ್ದರು.

3. ದಿಃ 05/08/2025 ರಂದು ನಾನು ಮತ್ತು ನನ್ನ ಹೆಂಡತಿ ಮನೆಗೆ ಬಂದು ತೋಟಕ್ಕೆ ಗೊಬ್ಬರ ಹಾಕಿ ಆ ದಿನ ಅಲ್ಲೇ ಉಳಿದುಕೊಂಡಿದ್ದು ಬೆಳಿಗ್ಗೆ ನಾವು ಪುನಃ ಶೃಂಗೇರಿಗೆ ಕೆಲಸಕ್ಕೆ ಹೋದೆವು. ಪುನಃ ನಾನು ದಿಃ 15/08/2025 ರಂದು ನಮ್ಮ ಊರಾದ ಚಿಕ್ಕಗ್ರಹಾರದ ಮನೆಗೆ ಬಂದಿದ್ದು, ಆಗ ಮನೆಯನ್ನು ನೋಡಲಾಗಿ ಸದರಿ ಮನೆಯ ಬೀಗವನ್ನು ಒಡೆಯಲಾಗಿದ್ದು, ನಾನು ಒಳಗೆ ಹೋಗಿ ನೋಡಿದಾಗ ಮನೆಯಲ್ಲಿದ್ದ ಗೋದ್ರೇಜ್ ಬೀರುವಿನ ಹ್ಯಾಂಡಲ್ ಕಟ್ಟಾಗಿದ್ದು, ಅದರಲ್ಲಿ 11 ಸಾವಿರ ರೂ. ನಗದು ಮತ್ತು 5 ಗ್ರಾಮ್ ತೂಕದ ಬಂಗಾರದ ಉಂಗುರ ಇಟ್ಟಿದ್ದು ಹಾಗೂ ಮನೆಯಲ್ಲಿ ಎರಡು ಹಂಡೆ ಮತ್ತು ಎರಡು ಕೊಡಪಾನಗಳನ್ನು ಹಾಗೂ ಅರ್ಧ ಹೆಚ್ ಪಿ ಕರೆಂಟ್ ಮೋಟರ್ ಇಟ್ಟಿದ್ದಾಗಿ ದೂರಿನಲ್ಲಿ ಹೇಳಿದ್ದು ಆದರೆ ಗಡಿಬಿಡಿಯಲ್ಲಿ ಆ ವಿಚಾರವನ್ನು ಹೇಳಿರುತ್ತೇನೆ. ಸದರಿ ಹಣ, ಬಂಗಾರ, ಹಂಡೆ, ಕೊಡಪಾನ ಹಾಗೂ ಮೋಟರನ್ನು ನನ್ನ ಹೆಂಡತಿ

ತೆಗೆದುಕೊಂಡು ಹೋಗಿದ್ದರು. ನಮ್ಮ ಮನೆಯಲ್ಲಿದ್ದ ಒಂದು ಗ್ಯಾಸ್ ಸಿಲಿಂಡರ್, 2 ಒಲೆಯ ಸ್ಟೌವ್, ಒಂದು ಸೋಲಾರ್ ಚಾರ್ಜರ್ ಬ್ಯಾಟರಿ, ಇಸ್ತ್ರಿ ಪೆಟ್ಟಿಗೆ ಹಾಗೂ ಸೋಲಾರ್ ಪ್ಯಾನಲ್ ಅನ್ನು ಯಾರೋ ಕಳ್ಳತನ ಮಾಡಿಕೊಂಡು ಹೋಗಿದ್ದು, ಸದರಿ ಕಳ್ಳತನ ಮಾಡಿದ ವಸ್ತುಗಳ ಅಂದಾಜು ಮೌಲ್ಯ 15 ಸಾವಿರ ರೂ. ಆಗಿರುತ್ತದೆ.

4. ನಂತರ ಸದರಿ ವಸ್ತುಗಳು ಕಳ್ಳತನ ಆದ ಬಗ್ಗೆ ದಿಃ 16/08/2025 ರಂದು ಪೊಲೀಸರಿಗೆ ದೂರನ್ನು ಕೊಟ್ಟಿರುತ್ತೇನೆ. ಅದೇ ದಿನ ಸಂಜೆ 6.00 ಗಂಟೆಗೆ ಪೊಲೀಸರು ಸ್ಥಳಕ್ಕೆ ಬಂದಿದ್ದು, ನಾನು ತೋರಿಸಿದ ಸ್ಥಳದಲ್ಲಿ ಶಿವಕುಮಾರ್ ಹಾಗೂ ರತ್ನಾಕರ ಸಮಕ್ಷಮ ಕೃತ್ಯ ಸ್ಥಳದ ಪಂಚನಾಮೆ ಮಾಡಿರುತ್ತಾರೆ. ಮಹಜರು ಮಾಡುವ ಕಾಲಕ್ಕೆ ಕೃತ್ಯಕ್ಕೆ ಬಳಸಿದ ಸುತ್ತಿಗೆ ರಾಡು ಇವುಗಳನ್ನು ವಶಪಡಿಸಿಕೊಂಡಿರುತ್ತಾರೆ. ದಿಃ 18/08/2025 ರಂದು ಆರೋಪಿತರು ಸಿಕ್ಕಿರುತ್ತಾರೆ ಎಂದು ಪೊಲೀಸರು ನಮ್ಮ ಮನೆ ಹತ್ತಿರ ಬಂದು ಮಹಜರನ್ನು ರಫೀಕ್ ಮತ್ತು ರಾಘವೇಂದ್ರ ರವರನ್ನು ಕರೆದುಕೊಂಡು ಬಂದು ಮ.12.00 ಗಂಟೆ ಸಮಯದಲ್ಲಿ ಮಹಜರು ಮಾಡಿರುತ್ತಾರೆ. ಮಹಜರು ಮಾಡುವ ಕಾಲಕ್ಕೆ ಪೋಟೋಗಳನ್ನು ತೆಗೆದಿರುತ್ತಾರೆ. ನಂತರ ನಾನು ದೂರು ಕೊಡುವ ಕಾಲಕ್ಕೆ 11 ಸಾವಿರ ಹಣ, 5 ಗ್ರಾಮ್ ಬಂಗಾರ, 2 ಹಂಡೆ, 2 ಕೊಡಪಾನ ಹಾಗೂ ಹೆಚ್ ಪಿ ಮೋಟರ್ ಕಳ್ಳತನ ಮಾಡಿರುತ್ತಾರೆ ಎಂದು ಹೇಳಿದ್ದು ಆದರೆ ಸದರಿ ವಸ್ತುಗಳನ್ನು ನನ್ನ ಹೆಂಡತಿಯು ಬೇರೆ ಕಡೆ ಇಟ್ಟಿರುವುದಾಗಿ ಹೇಳಿದ್ದು, ಆ ಸಂಬಂದ ನಾನು ಪೊಲೀಸರಿಗೆ ಮರುಹೇಳಿಕೆಯನ್ನು ಕೊಟ್ಟಿರುತ್ತೇನೆ. ಆ ದಿನ ಆರೋಪಿತರು ಕಳ್ಳತನ ಮಾಡಿಕೊಂಡು ಹೋದ ಒಂದು ಇಂಡೇನ್ ಗ್ಯಾಸ್ ಸಿಲಿಂಡರ್, 2 ಒಲೆಯ ಸ್ಟೌವ್, ಒಂದು ಸೋಲಾರ್ ಚಾರ್ಜರ್ ಬ್ಯಾಟರಿ, ಇಸ್ತ್ರಿ ಪೆಟ್ಟಿಗೆ ಹಾಗೂ ಸುಕಂ ಪವರ್ ಸಿಸ್ಟಮ್ ನ ಒಂದು ಸೋಲಾರ್ ಪ್ಯಾನಲ್, ಒಂದು ಕಬ್ಬಿಣದ ಸುತ್ತಿಗೆಯನ್ನು ನ್ಯಾಯಾಲಯದ ಆದೇಶದ ಮೇರೆಗೆ ಬಿಡಿಸಿಕೊಂಡು ಹೋಗಿರುತ್ತೇನೆ.

(ಈ ಹಂತದಲ್ಲಿ ಮುಂದುವರಿದ ಮುಖ್ಯವಿಚಾರಣೆಗೆ ಸರ್ಕಾರಿ ಅಭಿಯೋಜಕರು ಸಮಯ ಕೋರಿದ್ದು ಸಮಯ ನೀಡಲಾಯ್ತು.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ.

ಸಾಕ್ಷಿದಾರರ ಸಹಿಃ